magniflex

| PUBLICATION | : Prajavani | DATE | : March 07, 2012 |
|---|---|---|---|
| PUBLICATION TYPE | : Regional Daily | PAGE NO | : 07 |

# ಚೆಲ್ಲಾಪಿಲ್ಲಿ

## ಸುಖ ನಿದ್ರೆಗೆ 'ಫ್ರೆಶ್ ಟಚ್'



ನಿದ್ರೆ ದೇಹಕ್ಕೆ ಆರಾಮ. ಮನಸಿಗೂ ಹಿತ. ಆದರೆ ಬೇಸಿಗೆ ಬಂತೆಂದರೆ ಸಾಕು ನಿದ್ರೆಗೆ ತುಸು ಬ್ರೆಕ್ ಬೀಳುತ್ತದೆ. ಫ್ಯಾನ್ ಗಾಳಿಗೆ ಮೈಯೊಡ್ಡಿದರೂ ಬಿಸಿ ಗಾಳಿ. ಹಾಸಿಗೆಯಲ್ಲಿ ಮಲಗಲು ಆಗದು. ಇದಕ್ಕೆಂದೇ ಮ್ಯಾಗ್ನಿಫ್ಲೆಕ್ಸ್, 'ಫ್ರೆಶ್ ಟಚ್' ಎನ್ನುವ ಹೊಸ ಬಗೆಯ ಹಾಸಿಗೆಯನ್ನು ಮಾರುಕಟ್ಟೆಗೆ ತರುತ್ತಿದೆ.

ಫ್ರೆಶ್ ಟಚ್ ಮಲಗಲು ಆರಾಮ ನೀಡುತ್ತದೆ ಎಂದು ಕಂಪೆನಿ ಹೇಳಿಕೊಂಡಿದೆ. ಮೂರು ಪದರಗಳಲ್ಲಿ ಹಾಸಿಗೆಯನ್ನು ತಯಾರು ಮಾಡಲಾಗಿದ್ದು, ದೇಹದ ಕಾಲು, ಭುಜ ಮತ್ತಿತರ ಅಂಗಗಳಿಗೆ ವಿಶ್ರಾಂತಿ ನೀಡುತ್ತದೆ.

ಥರ್ಮೋ ರೆಗ್ಯುಲೇಟಿಂಗ್ ಎಂಬ ವಿಶೇಷ ಬಟ್ಟೆಯಿಂದ ತಯಾರು ಮಾಡಲಾಗಿದ್ದು, ದೇಹದ ಉಷ್ಣತೆಯನ್ನು ಸಮಸ್ಥಿತಿಯಲ್ಲಿಡಲು ಇದು ಸಹಕಾರಿಯಾಗಿದೆ. ಗ್ರಾಹಕರ ಬೇಡಿಕೆಗೆ ತಕ್ಕಂತೆ ವಿವಿಧ ಆಕೃತಿಗಳಲ್ಲಿ ಹಾಸಿಗೆಗಳನ್ನು ತಯಾರಿಸಲಾಗುತ್ತದೆ ಎಂದು ಕಂಪೆನಿ ಹೇಳಿದೆ.

ಪ್ರತಿ ಹಾಸಿಗೆಯೂ 21 ಸೆಂ.ಮೀ. ಎತ್ತರ ಹೊಂದಿರುತ್ತವೆ. ಹಾಸಿಗೆಯನ್ನು ಡ್ರೈಕ್ಲೀನ್ ಮಾಡಲೂಬಹುದು. ಮಾಹಿತಿಗೆ: 99861 56975.

⌘